# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಹೆಗ್ಗನಹಳ್ಳಿ ಉಪವಿಭಾಗ

### ವಾರ್ಡ್ ನಂ.71 : ಹೆಗ್ಗನಹಳ್ಳಿ

**ದಿನಾಂಕ: 03.07.2021 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಬಿ.ಆರ್ ರವಿಕುಮಾರ್ ನೋಡಲ್ ಅಧಿಕಾರಿ, ವಾರ್ಡ್ 71 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಗ್ಗನಹಳ್ಳಿ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

ಸಭೆಯಲ್ಲಿ ಹಾಜರಿದ್ದವರು:

| ಕ್ರಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಬಿ.ಆರ್ ರವಿಕುಮಾರ್ | ನೋಡಲ್ ಅಧಿಕಾರಿ-ವಾರ್ಡ್ ನಂ.71, ಸಹಾಯಕ ನಿರ್ದೇಶಕರು (ಪಶುಪಾಲನೆ) |
| 2 | ಶ್ರೀ ಮಂಜುನಾಥ್ ಡಿ ಎಸ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು-ವಾರ್ಡ್ 71 |
| 3 | ಹೆಚ್ ಟಿ ಮುನಿರಾಜು | ಕಂದಾಯ ವಸೂಲಿಗಾರರು- ವಾರ್ಡ್ 71 |
| 4 | ಡಾ.ಸುಷ್ಮಿತಾ | ಕೋವಿಡ್ ಮೆಡಿಕಲ್ ಆಫೀಸರ್, ಟ್ರಯಾಜ್ ಸೆಂಟರ್ |
| 5 | ರಾಮಣ್ಣ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 |
| 6 | ಸುರೇಶ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 |
| 7 | ವೆಂಕಟರಾಜು | ಸ್ಥಳೀಯ ನಾಗರೀಕರ ಕಲ್ಯಾಣ ಸಂಘ |
| 8 | ಎಂ ಎಲ್ ರವಿಕುಮಾರ್ | ಎಂ ಓ ಹೆಚ್ |
| 9 | ಸುರೇಶ್ ಕೆ ವಿ | ಸದಸ್ಯರು |
| 10 | ಎನ್ ಮುರುಳಿ | ಕಂದಾಯ ವಸೂಲಿಗಾರರು- ವಾರ್ಡ್ 71 |

:ನಡಾವಳಿಯ ವರದಿ:

- ಕಾರ್ಯದರ್ಶಿಗಳಾದ ಶ್ರೀ ಡಿ.ಎಸ್.ಮಂಜುನಾಥ್ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ಕೋವಿಡ್-19, ಸಾಂಕ್ರಾಮಿಕ ರೋಗದ ಬಗ್ಗೆ**
  - ಸಭೆಯಲ್ಲಿ ರಾಮಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 ರವರು 25/06/2021 ರಿಂದ 02/07/2021ರವರೆಗಿನ ಲಸಿಕಾಕರಣ ಹಾಗೂ ಕೋವಿಡ್ ತಪಾಸಣೆಗಾಗಿ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ತಿಳಿಸಲಾಯಿತು.

- ಶ್ರೀ ಬಿ.ಆರ್ ರವಿಕುಮಾರ್, ನೋಡಲ್ ಅಧಿಕಾರಿರವರು ಮಾತನಾಡಿ ಕೋವಿಡ್ ಸೋಂಕು ಇಳಿಕೆ ಕಂ ಆದರೂ ಸಹ ಮಾಸ್ಕ್ ಧರಿಸುವ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಾರ್ವಜನಿಕರಲ್ಲಿ ಮೂಡಿಸುವಂತೆ ಸೂಚಿಸಿದರು ಹಾಗೂ ಸಾರ್ವಜನಿಕರಲ್ಲಿ ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಹೆಚ್ಚಿನ ಪ್ರ ಕೈಗೊಂಡು ಅರಿವು ಮೂಡಿಸುವಂತೆ ಸೂಚಿಸಿದರು.

## BBMP SAHAYA APP:

- ಡಿ.ಎಸ್.ಮಂಜುನಾಥ್ ಸಹಾಯಕ ಅಭಿಯಂತರರು, ವಾರ್ಡ್ ನಂ.71 ಮಾತನಾಡಿ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇರುವುದಿಲ್ಲ ಎಂದು ತಿಳಿಸಿದರು.
- ರಾಮಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.71 ರವರು ಮಾತಾನಾಡಿ ವಾರ್ಡ್ 71ರ ವ್ಯಾಪ್ತಿಯಲ್ಲಿ ಪ್ರತಿ ದಿನ 180-200 ಟೆಸ್ಟ್ ನಡೆಸಲಾಗಿದ್ದು, ಇವುಗಳಲ್ಲಿ ಬೆರಳಣಿಕೆ ಸಂಖ್ಯೆಯಲ್ಲಿ ಸೋಂಕಿತರು ಕಂಡುಬರುತ್ತಿದ್ದು, ಸಾರ್ವಜನಿಕರಲ್ಲಿ ಹಾಗೂ ಬೀದಿ ವ್ಯಾಪಾರಿಗಳಲ್ಲಿ ಸ್ವಚ್ಛತೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಅರಿವು ಮೂಡಿಸಲಾಗಿದೆ ಹಾಗೂ ವ್ಯಾಕ್ಸಿನೇಷನ್ ಮಾಡಿಸಲು ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ ಜನರು ಗುಂಪು ಗುಂಪಾಗಿ ಸೇರುವ ಕಡೆಗಳಾದ, ಹೋಟೆಲ್, ಅಂಗಡಿಗಳು, ದೇವಸ್ಥಾನ ಇನ್ನಿತರ ತಾಣಗಳಲ್ಲಿ ಸಾರ್ವಜನಿಕರಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಹಾಗೂ ಮಾಸ್ಕ್ ಧರಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.
- ಎಲ್ಲಾ ಸಮಿತಿ ಸದಸ್ಯರುಗಳು/ ಅಧಿಕಾರಿಗಳು/ WDC ಸದಸ್ಯರುಗಳು ವಾರ್ಡ್‌ನ ವ್ಯಾಪ್ತಿಯಲ್ಲಿ ಕೋವಿಡ್-19 ಪಿಡುಗನ್ನು ತಡೆಗಟ್ಟಲು ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| **ಸದಸ್ಯ ಕಾರ್ಯದರ್ಶಿ-ವಾರ್ಡ್ 71 ಹಾಗೂ** | **(ಬಿ.ಆರ್ ರವಿಕುಮಾರ್)** |
| **ಸಹಾಯಕ ಅಭಿಯಂತರರು,** | **ನೋಡಲ್ ಅಧಿಕಾರಿ ವಾರ್ಡ್-71** |

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಕಳುಹಿಸಿದೆ.
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಂದಾಯ ಅಧಿಕಾರಿ (ಹೆಗ್ಗನಹಳ್ಳಿ) ರವರ ಮಾಹಿತಿಗಾಗಿ ಕಳುಹಿಸಿದೆ.
7) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.70 ರವರ ಮಾಹಿತಿಗಾಗಿ
8) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ